# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ




## ಬಲಿ ಬಹನ್-ಹರಿಲಾಲ ಕದನ

'ಬಲಿ ಬಹನ್!' ಹರಿಲಾಲ ಹೊಸ್ತಿಲ ಬಳಿಯೇ ನಿಂತು ಹೇಳಿದ. ಅವನ ಕಾಲುಗಳು ಓಲಾಡುತ್ತಿದ್ದವು. ಈಗ ಅವನು ಬಾಗಿಲ ಆಸರೆಯನ್ನು ಬಿಟ್ಟು ಗೋಡೆಯ ಮೇಲೆ ಕೈಯಿಟ್ಟ, 'ಕಾಂತಿ ಎಲ್ಲಿದ್ದಾನೆ? ನಾನು ಅವನನ್ನು ಡಾಕ್ಟರ್ ಮಾಡಬೇಕು... ಮತ್ತೆ... ಮತ್ತೆ... ಮನು... ಮನು... ನನ್ನ ಮುದ್ದಿನ ಮಗಳೇ...?' ಎನ್ನುತ್ತಾ ಹರಿಲಾಲ ಮನುವನ್ನು ಎತ್ತಿಕೊಳ್ಳಲು ಕೈಯನ್ನು ಚಾಚಿದ. ಮನು ಮೆಲ್ಲನೆ ಕಿರುಚಿ, ಎರಡು ಹೆಜ್ಜೆ ಹಿಂದಕ್ಕೆ ಸರಿದಳು. ವಿಷಯವೇನೆಂದು ಬಲಿ ಬಹನಳಿಗೆ ತಕ್ಷಣ ಅರ್ಥವಾಯಿತು. ಮನುವನ್ನು ಇನ್ನೂ ಸ್ವಲ್ಪ ಹಿಂದಕ್ಕೆ ತಳ್ಳಿ ಅವಳು ಹರಿಲಾಲನ ಎದುರು ಬಂದು ಧೈರ್ಯದಿಂದ ನಿಂತಳು.

'ಹರಿಲಾಲ್', ಬಲಿ ಬಹನ್ ಗಡಸು ಧ್ವನಿಯಲ್ಲಿ ಗಟ್ಟಿಯಾಗಿ ಹೇಳಿದಳು, 'ಅರ್ಧ ರಾತ್ರಿಗೆ ಹೀಗೆ ಕುಡಿದು ಬಂದು ರಂಪಾಟ ಮಾಡುವುದು ನಿನಗೆ ಶೋಭೆಯನ್ನು ತರುವಂಥದಲ್ಲ'

'ಎಚ್ಚರ!' ಹರಿಲಾಲನೂ ಸಹ ಎತ್ತರದ ಧ್ವನಿಯಲ್ಲಿ ಹೇಳಿದ, 'ನಾನು ಕುಡುಕನಲ್ಲ. ನಾನು ಸಂಪೂರ್ಣ ಎಚ್ಚರದಲ್ಲಿದ್ದೇನೆ. ನಾನು ನನ್ನ ಮಗಳನ್ನು ನಿನ್ನ ವಶದಲ್ಲಿರಲು ಬಿಡುವುದಿಲ್ಲ... ಬಾರಮ್ಮ ಮನು...ಮನು ಬಚ್ಚಿ...ನಡಿ ಹೋಗೋಣ...ನಾನು ನಿನ್ನ ತಂದೆ...'

'ಅಪ್ಪಾ...' ಮನು ಗಾಬರಿಯಿಂದ ಚೀರಿದಳು, 'ನೀವು... ನೀವು ಸಾರಾಯಿ ಕುಡಿದಿದ್ದೀರ...ನೋಡಿ, ಎಷ್ಟು ಕೆಟ್ಟ ವಾಸನೆ ಬರುತ್ತಿದೆ.'

'ಸಾರಾಯಿ?' ಹರಿಲಾಲ ಮುಂದಕ್ಕೆ ಬಂದ, ಆದರೆ ಅವನ ಹೆಜ್ಜೆಗಳು ತಡಬಡಿಸಿದವು, 'ಹೌದು...ನಾನು ಸಾರಾಯಿಯನ್ನು ಕುಡಿದಿದ್ದೇನೆ...ಆದರೆ...ಆದರೆ...ನಿನಗೆ ನಿನ್ನ ಚಿಕ್ಕಮ್ಮ ಇದನ್ನೆಲ್ಲಾ ಹೇಳಿ ಕೊಟ್ಟಿರಬೇಕು...'

ನಂತರ ಹರಿಲಾಲ ಬಲಿ ಬಹನಳನ್ನು ನೋಡುತ್ತಾ ಹೇಳಿದ, 'ಬಲಿ ಬಹನ್, ನಿನ್ನ ಚಾಲಾಕುತನ ನನಗೆ ತಿಳಿದಿದೆ...ನೀನು ಒಂಟಿ...ವಿಧವೆ...ಹೆಂಗಸು...'

'ಬಾಯಿ ಮುಚ್ಚು ಹರಿಲಾಲ್!' ಬಲಿ ಬಹನ್ ಕಿರುಚಿದಳು.

'ನಾನು ಸುಮ್ಮನಿರುವುದಿಲ್ಲ...ನಿನ್ನೆಲ್ಲಾ ಕೆಟ್ಟ ಕೆಲಸಗಳು ನನಗೆ ತಿಳಿದಿವೆ...ನಾನು ಇದುವರೆಗೆ ಸುಮ್ಮನಿದ್ದೆ...ಈಗ... ಈಗ ...ಸುಮ್ಮನಿರುವುದಿಲ್ಲ...' ಎನ್ನುವಾಗ ಹರಿಲಾಲನಿಗೆ ವಾಂತಿ ಬಂದಂತಾಯಿತು.

ಬಲಿ ಬಹನ್ ಕಂಪಿಸಿದಳು. ಮನು ತನ್ನೆರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಗಟ್ಟಿಯಾಗಿ ರೋದಿಸಿದಳು.

'ಮಗಳೇ, ಅಳಬೇಡ!' ಹರಿಲಾಲ ಬಲಿ ಬಹನಳನ್ನು ಬಲಾತ್ಕಾರದಿಂದ ಎಳೆದು, ಅವಳನ್ನು ಮನುವಿನಿಂದ ಬೇರೆ ಮಾಡಲು ಮೆಲ್ಲನೆ ಅವಳನ್ನು ತಳ್ಳಿದ, ನಾನು ನಿನ್ನನ್ನು ಈ ಚಿಕ್ಕಮ್ಮನ ಬಲೆಯಿಂದ ಬಿಡಿಸುತ್ತೇನೆ.

'ಹರಿಲಾಲ್!' ಬಲಿ ಬಹನ್ ಹರಿಲಾಲನ ಹೆಗಲನ್ನು ಹಿಡಿದು ಅವನು ಮುಂದುವರೆದು ಬರುವುದನ್ನು ತಡೆದಳು. ಹರಿಲಾಲನಿಗೆ ಮತ್ತೊಮ್ಮೆ ವಾಂತಿ ಬಂದಂತಾಯಿತು. ಅವನು ಬಾಗಿಲ ಬಳಿಯೇ ಇದ್ದ ಹೊಸ್ತಿಲ ಪಕ್ಕದಲ್ಲಿಯೇ ಉಗಿದ. ಬಲಿ ಬಹನ್ ಮತ್ತು ಮನು ಇಬ್ಬರೂ ಭಯದಿಂದ ಕಂಪಿಸಿದರು.

'ಇನ್ನು ನೀನು ನನ್ನನ್ನು ತಡೆಯಲು ಸಾಧ್ಯವಿಲ್ಲ ಬಲಿ ಬಹನ್...' ಹರಿಲಾಲ ಇನ್ನಷ್ಟು ಮುಂದೆ ಬಂದ, 'ನನಗೆ ಗೊತ್ತಿದೆ, ನೀನು ಮತ್ತು ಬಾಪೂ ಇಬ್ಬರೂ ಒಂದಾಗಿದ್ದೀರ... ಆದರೆ ನಾನು ಯಾರನ್ನೂ ಲೆಕ್ಕಿಸುವುದಿಲ್ಲ...ನೀನು ವೇಶ್ಯೆ... ವಿಧವೆ....ನನಗೆ ನಿನ್ನ ಪಾಪಕರ್ಮಗಳೆಲ್ಲವೂ ಗೊತ್ತಿದೆ...'

'ಹರಿಲಾಲ್, ಹೀಗೇಕೆ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದೀಯ? ನಿನಗೆ ನಾಚಿಕೆಯಾಗುವುದಿಲ್ಲವೇ? ಇನ್ನು ನೀನು ಒಂದು ಶಬ್ದವನ್ನೂ ಹೇಳಿದರೆ, ನಾನು ಸಹಿಸುವುದಿಲ್ಲ.... ಬೊಗಳುವುದನ್ನು ನಿಲ್ಲಿಸು' ಬಲಿ ಬಹನ್ ರೋಷಾವೇಶದಲ್ಲಿ ಹೇಳಿದಳು.

'ಬೊಗಳುವುದನ್ನು ನಿಲ್ಲಿಸಬೇಕೆ?' ಹರಿಲಾಲ ತಾನು ಉಗಿದಿದ್ದ ಜಾಗದಲ್ಲಿ ಕಾಲನ್ನಿಟ್ಟು ಹೇಳಿದ, 'ಇದನ್ನು ನೀನು ಬೊಗಳುವುದು ಎನ್ನುತ್ತೀಯ? ನನ್ನ ಮಾತುಗಳಿಂದ ನಿನ್ನ ಸತ್ಯ ಬಯಲಾಗುತ್ತದೆ, ಅದಕ್ಕಾದರೂ ನಾನು ಬೊಗಳುತ್ತೇನೆ...' ಹರಿಲಾಲ ಮತ್ತೆ ತಡಬಡಿಸಿದ. ನಂತರ ಒಂದು ಕ್ಷಣ ಸುಮ್ಮನಿದ್ದು ಮತ್ತೆ ಮುಂದಕ್ಕೆ ಬಂದ, 'ನಡಿ ಹೋಗೋಣ ಮನು...ನಡಿ...ನಾನು ನಿನ್ನ ತಂದೆ...ನಾನು ನಿನ್ನನ್ನು ಇಲ್ಲಿಂದ ಕರೆದೊಯ್ಯುತ್ತೇನೆ...ಕಾಂತಿಯನ್ನೂ ಕರೆದೊಯ್ಯುತ್ತೇನೆ... ಅವನನ್ನು ಡಾಕ್ಟರ್ ಮಾಡುತ್ತೇನೆ...ಮತ್ತೆ...ಮತ್ತೆ...' ಹರಿಲಾಲ ಈಗ ತುಟಿಗಳನ್ನು ಕಚ್ಚಿಕೊಳ್ಳುತ್ತಾ ಮುಂದುವರೆದ, 'ಇವಳನ್ನು ನಾನು ಚೆನ್ನಾಗಿ ಬಲ್ಲೆ. ಇವಳನ್ನು ಇನ್ನು ನಾನು ನೋಡಿಕೊಳ್ಳುತ್ತೇನೆ...ಇವಳ ದುಷ್ಕೃತ್ಯಗಳು...'

'ಹರಿಲಾಲ್!' ಈಗ ಬಲಿ ಬಹನಳಿಗೆ ತಡೆದುಕೊಳ್ಳಲಾಗಲಿಲ್ಲ. ಮನುವನ್ನು ಹಿಡಿದುಕೊಳ್ಳಲು ಕೈಚಾಚಿದ್ದ ಹರಿಲಾಲನ ಎದುರು ಬಂದು ರಣಚಂಡಿಯಂತೆ ನಿಂತಳು, 'ಇನ್ನು ಒಂದು ಶಬ್ದವನ್ನು ಹೇಳಿದರೆ ಅಥವಾ ಒಂದು ಹೆಜ್ಜೆ ಮುಂದೆ ಬಂದರೆ...ಬಂದರೆ...'

'ಏನು ಮಾಡುತ್ತೀಯ?' ಹರಿಲಾಲ ಅಸಡ್ಡೆಯಿಂದ